**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸ್ಪೆಷಲ್ ಸಿ. ನಂ.41/2023</u>**

ದಿನಾಂಕ 13.02.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 17 ಪ್ರಾಸಾ - 11

| | | |
|---|---|---|
| ಹೆಸರು | ಃ | ಓಂ ಪ್ರಕಾಶ್ |
| ತಂದೆಯ ಹೆಸರು | ಃ | ಅಂಜನಪ್ಪ ಟಿ ಪಿ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಡಿವೈಎಸ್‌ಪಿ, ಕುಣಿಗಲ್ |
| ವಾಸಸ್ಥಳ | ಃ | ಕುಣಿಗಲ್ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 12.07.2022 ರಿಂದ ದಿನಾಂಕ 27.11.2023 ರವರೆಗೆ ನಾನು ಡಿವೈಎಸ್‌ಪಿ ಚನ್ನಪಟ್ಟಣ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ ಕಡತವನ್ನು ದಿನಾಂಕ 03.10.2022 ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗರ ಇವರ ಆದೇಶದಂತೆ ಪ-ಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ 9 ರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ.

3. ಅದೇ ದಿನ ಕೃತ್ಯದ ಸ್ಥಳಕ್ಕೆ ಭೇಟಿ ನೀಡಿದ್ದು ಪಿರ್ಯಾದಿ ತೋರಿಸಿದಂತಹ ಸ್ಥಳದಲ್ಲಿ ಸಂಜೆ 4.45 ರಿಂದ 5.30 ಸಮಯದಲ್ಲಿ ಪಂಚರಾದ ವಿ.ಕೆ.ಚಂದ್ರೇಶೇಖರ್ ಮತುತ ಸಿದ್ದರಾಜು ಅವರ ಸಮಕ್ಷಮದಲ್ಲಿ ನಿ.ಪಿ.9 ರ ಮಹಜರ್ ತಯಾರಿಸಲಾಗಿದೆ. ಮಹಜರ್ ನಲ್ಲಿರುವಂತಹ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ಛಾಯಾಚಿತ್ರಗಳನ್ನು ತೆಗೆದಿದ್ದು, ಸಾಕ್ಷಿ ಸದರಿ ಫೋಟೋಗಳನ್ನು ಗುರುತಿಸಿದ್ದು ಅದನ್ನು ನಿ.ಪಿ.10 ಮತ್ತು 11 ಎಂದು ಈಗಾಗಲೇ ಗುರುತಿಸಲಾಗಿದೆ. ಸ್ಥಳದ ಕಚ್ಚಾ ನಕ್ಷೆಯನ್ನು ಸಹ ತಯಾರಿಸಿರುತ್ತೇನೆ. ಸಾಕ್ಷಿ

ಕಚ್ಚಾ ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.19 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು.

4. ಪ್ರಕರಣದಲ್ಲಿ ಮರ ಕಡಿದು ಟ್ರ್ಯಾಕ್ಟರ್ ನಲ್ಲಿ ತುಂಬಿಕೊಂಡು ಹೋಗಿದ್ದಂತಹ ಟ್ರ್ಯಾಕ್ಟರ್ ನ್ನು 112 ಸಿಬ್ಬಂದಿಗಳು ಅಕ್ಕೂರು ಪೊಲೀಸ್ ಠಾಣೆಯ ಆವರಣದಲ್ಲಿ ತಂದು ನಿಲ್ಲಿಸಿದ್ದ ಬಗ್ಗೆ ಪಿಎಸ್ಐ ಅಕ್ಕೂರು ಪೊಲೀಸ್ ಠಾಣೆಯವರು ವರದಿ ನೀಡಿರುತ್ತಾರೆ. ಸದರಿ ವರದಿಯನ್ವಯ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಆದ ಕೆಎ-42-ಟಿ-4974-4975 ಟ್ರ್ಯಾಲಿಯನ್ನು ಮುಂದಿನ ತನಿಖೆಗಾಗಿ ಅಮಾನತು ಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 198/2022 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ 4 ಫೋಟೋಗಳನ್ನು ತೆಗೆಯಲಾಗಿದೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 12 ರಿಂದ 15 ಎಂದು ಈಗಾಗಲೇ ಗುರುತಿಸಲಾಗಿದೆ. ಅಕ್ಕೂರು ಪೊಲೀಸ್ ಠಾಣೆಯ ಪಿಎಸಐ ರವರು ನೀಡಿದ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಶಾನೆ ಪಿ 17 ಎಂದು ಈಗಾಗಲೇ ಗುರುತಿಸಲಾಗಿದೆ. ಅದನ್ನು ಸ್ವೀಕರಸಿದ ಸಲುವಾಗಿ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 17(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 10 ರಿಂದ 15 ಫೋಟೋಗಳನ್ನು ಪ್ರಾಸಾ 10 ರವರು ತೆಗೆದಿದ್ದು, ಅದಕ್ಕೆ ಸಂಬಂಧಿಸಿದಂತೆ ಅವರು ನಿಶಾನೆ ಪಿ 18 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65ಬಿ ರನ್ವಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

5. ದಿಃ 14.10.2022 ರಂದು ಪಿರ್ಯಾದುದಾರರ ಮತ್ತು ಆರೋಪಿಗಳ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಚನ್ನಪಟ್ಟಣ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ವಿರೂಪಾಕ್ಷಿಪುರದ ಸರ್ವೇನಂ.540 ಮತ್ತು 308 ರ ಜಮೀನಿನ ದಾಖಲಾತಿಗಳನ್ನು ಸಹ ನೀಡುವಂತೆ ಚನ್ನಪಟ್ಟಣ ತಹಶೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಪಿರ್ಯಾದುದಾರರ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

6. ದಿನಾಂಕ 17.10.2022 ರಂದು ಸಾಕ್ಷಿದಾರರಾದ ಪ್ರಾಸಾ 4 ಮಲವೇಗೌಡ, ಪ್ರಾಸಾ 3 ತಿಮ್ಮೇಗೌಡ, ಪ್ರಾಸಾ 1 ಪುಟ್ಟೇಗೌಡ, ಸ್ವಾಮಿ, ಪ್ರಾಸಾ 2 ಚಿಕ್ಕಮಾಯಿಗಯ್ಯ ಉಃ ಚಿಕ್ಕಣ್ಣ ರವರ ಹೇಳಿಕೆಯನ್ನು ಪಡೆದುಕೊಂಡೆ. ಅವರುಗಳು ನನ್ನ ಸಮಕ್ಷಮ ನಿಶಾನೆ ಪಿ 4, 3, 1 ಮತ್ತು 2 ರಂತೆ ಕ್ರಮವಾಗಿ ಹೇಳಿಕೆ ನೀಡಿರುತ್ತಾರೆ.

7. ದಿನಾಂಕ 18.11.2022 ರಂದು ಘಟನೆ ನಡೆದ ದಿನ 112 ವಾಹನದಲ್ಲಿ ಇದ್ದಂತಹ ಸಿಬ್ಬಂದಿಗಳಾದ ಲೋಕೇಶ್ ಎನ್.ಎಸ್. - ಹೆಚ್ಸಿ 112 ಮತ್ತು ಅರುಣ್ ಪೂಜಾರಿ ಸಿಪಿಸಿ 577 ರವರ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡೆ.

8. ದಿನಾಂಕ 17.11.2022 ರಂದು ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ ಸರ್ವೇನಂ.540 ರ ಜಮೀನಿನ ದಾಖಲಾತಿಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡೆ. ಅವುಗಳನ್ನು ನಿಶಾನೆ ಪಿ 6 ಎಂದು ಈಗಾಗಲೇ ಗುರುತಿಸಲಾಗಿದೆ.

9. ದಿನಾಂಕ 05.12.2022 ರಂದು ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ ಸರ್ವೇ ನಂ.338 ರ ಜಮೀನಿನ ದಾಖಲಾತಿಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡೆ.

10. ದಿನಾಂಕ 11.01.2023 ರಂದು ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ ಪಿರ್ಯಾದುದಾರರು ಮತ್ತು ಆರೋಪಿಗಳ ಜಾತಿ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು, ಅವುಗಳನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡೆ. ಅದನ್ನು ನಿಶಾನೆ ಪಿ 7 ಎಂದು ಈಗಾಗಲೇ ಗುರುತಿಸಲಾಗಿದೆ.ಅದೇ ದಿನ ತನಿಖೆ ಮುಕ್ತಾಯಗೊಳಿಸಿ ಆರೋಪಿಗಳ ಪತ್ತೆ ಆಗದೇ ಇರುವ ಕಾರಣ ಅದನ್ನು ದೋಷಾರೋಪಣಾ ಪಟ್ಟಿಯಲ್ಲಿ ನಮೂದು ಮಾಡಿ, ಸಾಕಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

<u>**ಪಾಟೀ ಸವಾಲುಃ ಶ್ರೀ.ಕೆ.ಸಿ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ**</u>

11. ಪಿರ್ಯಾದುದಾರ ತನ್ನ ದೂರಿನಲ್ಲಿ ಮಾಲಿಂಗ ಉಃ ಲೇಔಟ್ ಮಾಲಿಂಗ ನ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹೇಳುತ್ತಾರೆ ಆತ ಈ ಪ್ರಕರಣದಲ್ಲಿ 4 ಜನ ಆರೋಪಿಗಳಲ್ಲಿ ಒಬ್ಬನಾಗಿರುತ್ತಾನೆ. ದೂರಿನಲ್ಲಿ ಮೊದಲ ಹೆಸರು ಮಾಲಿಂಗನದ್ದೇ ಇದೆ ಎಂದರೆ ಸರಿ. ಸರ್ವೇ ನಂ.540 ಮತ್ತು 338 ಕ್ಕೆ ಸಂಬಂಧಿಸಿದಂತೆ ತಕರಾರು ಇದೆ ಎಂದರೆ ಸಾಕ್ಷಿ ಜಮೀನಿನ ಗಡಿಗಳ ಬಗ್ಗೆ ಮಾತ್ರ ತಕರಾರು ಇದೆ ಎಂದು ಉತ್ತರಿಸಿರುತ್ತಾರೆ. ಸದರಿ ಸರ್ವೇ ನಂ ಜಮೀನುಗಳ ಗಡಿಗೆ ಸಂಬಂಧಿಸಿದಂತೆ ವಿವಾದ ಇದೆ ಎಂದು ನಾನು ನನ್ನ ತನಿಖಾ ದಾಖಲಾತಿಯಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ಸ್ಥಳ ಪಂಚನಾಮೆಯ ಕಾಲಕ್ಕೆ ಸರ್ವೇ ಇಲಾಖೆಯವರ ಮೂಲಕ ಎರಡೂ ಸರ್ವೇ ನಂ. ಗಳನ್ನು ಅಳತೆ ಮಾಡಿಸಿರುವುದಿಲ್ಲ. ಸದರಿ ಜಮೀನುಗಳನ್ನು ನಾನು ಅಳತೆ ಮಾಡಿಸಿರುವುದಿಲ್ಲ.

12. ಪಿರ್ಯಾದುದಾರ ನನಗೆ ಸ್ಥಳ ತೋರಿಸಿಲ್ಲ, ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ, ನಿಶಾನೆ ಪಿ 9 ರ ಮಹಜರ್ ನ್ನು ಠಾಣೆಯಲ್ಲಿಯೇ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ಜಪ್ತು ಪಡಿಸಿಕೊಂಡ ನಂತರ ಅದರ ಮಾಲೀಕರು ಯಾರು ಎಂದು ಖಚಿತ ಪಡಿಸಿಕೊಳ್ಳಲು ಮಾಲಿಕತ್ವದ ದಾಖಲಾತಿಯನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಯಾರಿಗೆ ಸೇರಿದ್ದು ಎಂಬುವುದರ ಬಗ್ಗೆ ನಾನು ನನ್ನ ತನಿಖಾ ವರದಿಯಲ್ಲಿ ಹೇಳಿಕೊಂಡಿಲ್ಲ ಎಂದರ ಸಾಕ್ಷಿ ಅದರ ಅವಶ್ಯಕತೆ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಘಟನೆಯ ದಿನ ಟ್ರ್ಯಾಕ್ಟರ್ ನ್ನು ಯಾರು ಚಲಾಯಿಸುತ್ತಿದ್ದರು ಎಂದು ಕೂಡ ನಾನು ನನ್ನ ತನಿಖಾ ವರದಿಯಲ್ಲಿ ಕಾಣಿಸಿರುವುದಿಲ್ಲ. ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ಯಾರು ತೆಗೆದುಕೊಂಡು ಹೋದರು ಎಂದು ನನಗೆ ತನಿಖೆ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

13. ಪ್ರಾಸಾ 1 ರಿಂದ 4 ರವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂಂದಿರುವ ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೇ ಇದ್ದು ಅವರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**